# ಕಪ್ಪು ಹಣದ ಖದೀಮರು

ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಮೂವತ್ತು ಸಾವಿರ ಕೋಟಿ ರೂಪಾಯಿ ಕಪ್ಪು ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂಬ ಸ್ಫೋಟಕ ಮಾಹಿತಿ ಬೆಳಕಿಗೆ ಬಂದಿದೆ. ಇತ್ತೀಚೆಗೆ ಕೇಂದ್ರದ ನೇರ ತೆರಿಗೆ ಮಂಡಳಿಯ ಅಧ್ಯಕ್ಷರು ಈ ವಿಷಯವನ್ನು ರಾಷ್ಟ್ರೀಯ ವಿಚಾರ ಸಂಕಿರಣವೊಂದರಲ್ಲಿ ಬಹಿರಂಗ ಪಡಿಸಿದ್ದಾರೆ. ಇದು ನಿಜಕ್ಕೂ ಆತಂಕಕಾರಿ ಸಂಗತಿ. ದೂರುಗಳನ್ನು ಆಧರಿಸಿ ತೆರಿಗೆ ಮಂಡಳಿ ದಾಳಿ ನಡೆಸಿ ವಶಪಡಿಸಿಕೊಂಡ ಕಪ್ಪು ಹಣವೇ ಇಷ್ಟಿರುವಾಗ ದೇಶದ ಉದ್ದಗಲದಲ್ಲಿ ಬಚ್ಚಿಟ್ಟಿರುವ ಇಂಥ ಹಣ ಎಷ್ಟಿರಬಹುದು? ಒಂದು ಅಧ್ಯಯನದ ಪ್ರಕಾರ, ಕಳೆದ ಎರಡು ದಶಕಗಳಲ್ಲಿ ದೇಶದಲ್ಲಿ ಸ್ಥಳೀಯವಾಗಿ ಸಂಗ್ರಹವಾಗುತ್ತಿರುವ ಕಪ್ಪು ಹಣದ ಪ್ರಮಾಣ ಹೆಚ್ಚಾಗಿದೆಯಂತೆ. ಅಷ್ಟೇ ಅಲ್ಲ, ವಿದೇಶಿ ಬ್ಯಾಂಕುಗಳಲ್ಲಿ ಭಾರತೀಯರು ಠೇವಣಿಯಾಗಿಟ್ಟ ಕಪ್ಪು ಹಣದ ಪ್ರಮಾಣವೂ ಹೆಚ್ಚಾಗಿದೆ. ಒಂದು ಅಂದಾಜಿನ ಪ್ರಕಾರ ಸ್ವಿಝರ್ಲ್ಯಾಂಡ್‌ನ ಬ್ಯಾಂಕುಗಳಲ್ಲಿ 1,456 ಶತಕೋಟಿ ಡಾಲರ್ ಭಾರತೀಯ ಮೂಲದ ಕಪ್ಪು ಹಣ ಠೇವಣಿ ರೂಪದಲ್ಲಿದೆ. ಈ ಮೊತ್ತ ಎಷ್ಟೆಂದರೆ ಭಾರತದ ಒಟ್ಟು ಸಾಲದ ಹದಿಮೂರು ಪಟ್ಟು! ಒಟ್ಟಿನಲ್ಲಿ ಲಕ್ಷಾಂತರ ಕೋಟಿ ರೂಪಾಯಿ ಕಪ್ಪು ಹಣವಿದೆ ಎಂದಾಯಿತು.

ತೆರಿಗೆ ಮಂಡಳಿ ನಡೆಸುವ ಪ್ರತಿ ದಾಳಿಯಲ್ಲೂ ನೂರು ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ವಶಪಡಿಸಿಕೊಳ್ಳುತ್ತಿದ್ದೇವೆ ಎಂದು ಮಂಡಳಿ ಅಧ್ಯಕ್ಷರು ಹೇಳಿದ್ದಾರೆ. ಕಪ್ಪು ಹಣದ ಮೂಲ ಭ್ರಷ್ಟಾಚಾರ ಹಾಗೂ ತೆರಿಗೆ ವಂಚನೆ. ಸ್ವಾತಂತ್ರ್ಯಾನಂತರ ಕೇಂದ್ರ ಹಾಗೂ ವಿವಿಧ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಬಹಳಷ್ಟು ರಾಜಕೀಯ ಧುರೀಣರು ಭ್ರಷ್ಟಾಚಾರದ ಮೂಲಕ ಗಳಿಸಿದ ಅಪಾರ ಸಂಪತ್ತೇ ಈ ಕಪ್ಪು ಹಣ. ಈ ಹಣ ದೇಶದ ಅರ್ಥ ವ್ಯವಸ್ಥೆಯನ್ನು ಹಾಳು ಮಾಡಿದೆ. ಹಣದುಬ್ಬರಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲ, ನಮ್ಮ ಚುನಾವಣಾ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ. ಕಪ್ಪು ಹಣ ಇರುವವರು ಅದನ್ನು ಬಳಸಿಕೊಂಡು ಚುನಾವಣೆಗಳಲ್ಲಿ ಗೆದ್ದು ಅಧಿಕಾರಕ್ಕೆ ಬಂದು ದೇಶವನ್ನು ನಿರಂತರ ಕೊಳ್ಳೆ ಹೊಡೆಯುತ್ತಿದ್ದಾರೆ. ರಾಜಕಾರಣಿಗಳಷ್ಟೇ ಅಲ್ಲ, ಸರ್ಕಾರದ ಆಯಕಟ್ಟಿನ ಸ್ಥಾನಗಳಲ್ಲಿ ಇರುವ ಉನ್ನತ ಅಧಿಕಾರಿಗಳು, ಉದ್ಯಮಿಗಳು ಸೇರಿದಂತೆ ವಿವಿಧ ವೃತ್ತಿಗಳ ಇರುವ ಜನರು ತಮ್ಮ ಆದಾಯದ ಮೂಲಗಳನ್ನು ಮರೆಮಾಚಿ ಸರ್ಕಾರಕ್ಕೆ ತೆರಿಗೆ ಕಟ್ಟದೆ ಅಪಾರ ಹಣವನ್ನು ಬಚ್ಚಿಟ್ಟಿದ್ದಾರೆ.

ಕಪ್ಪು ಹಣದ ಹಾವಳಿಯನ್ನು ಕಡಿಮೆ ಮಾಡುವುದು ಆರ್ಥಿಕ ಉದಾರೀಕರಣದ ಉದ್ದೇಶವಾಗಿತ್ತು. ದುರದೃಷ್ಟವೆಂದರೆ  ಕಪ್ಪು ಹಣದ ಪ್ರಮಾಣ ಹೆಚ್ಚಾದದ್ದು ಉದಾರೀಕರಣ ಪ್ರಕ್ರಿಯೆ ನಂತರ. ಸಡಿಲಗೊಂಡ ರಿಸರ್ವ್ ಬ್ಯಾಂಕಿನ ನಿಯಮಗಳೂ ಅದಕ್ಕೆ ಕಾರಣ ಎಂಬ ಆರೋಪಗಳಿವೆ. ಕಪ್ಪು ಹಣವನ್ನು ಪತ್ತೆ ಹಚ್ಚಿ ಅದನ್ನು ಮತ್ತೆ ದೇಶಕ್ಕೆ ತರಬೇಕು ಎಂಬ ಒತ್ತಾಯ ಕೇಳಿ ಬರುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದೇಶಿ ಬ್ಯಾಂಕುಗಳು ಮಾಡಿಕೊಂಡ ಒಪ್ಪಂದಗಳಿಂದಾಗಿ ಕಪ್ಪು ಹಣವನ್ನು  ಪತ್ತೆ ಹಚ್ಚಿ ಹಿಂದಕ್ಕೆ ತರುವುದು ಸಾಧ್ಯವಿಲ್ಲ ಎಂದು ಪ್ರಧಾನಿಯವರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಆದರೆ ಯಾವುದೇ ಒಪ್ಪಂದ ದೇಶದ ಸಾರ್ವಜನಿಕ ಹಿತಕ್ಕಿಂತ ದೊಡ್ಡದಲ್ಲ. ಈ ಒಪ್ಪಂದಗಳನ್ನು ಪುನರ್ ಪರಿಶೀಲಿಸುವಂತೆ ಒತ್ತಾಯ ತರುವ ಅಗತ್ಯವಿದೆ. ವಿದೇಶಿ ಬ್ಯಾಂಕುಗಳಲ್ಲಿ ಠೇವಣಿ ಇಟ್ಟವರ ಹೆಸರುಗಳನ್ನು ಪತ್ತೆ ಹಚ್ಚಿ ಅವರ ಆದಾಯ ಮೂಲಗಳನ್ನು ಬಗ್ಗೆ ತನಿಖೆ ನಡೆಸಬೇಕು. ಕಪ್ಪು ಹಣ ಎನ್ನುವುದು ಸಾಬೀತಾದರೆ ಅದನ್ನು ವಶಪಡಿಸಿಕೊಂಡು ದೇಶದ ಅಭಿವೃದ್ಧಿಗೆ ಬಳಸಿದರೆ ಬಡತನ ದೂರವಾಗುತ್ತದೆ. ದೇಶ ಸ್ವಾವಲಂಬಿಯಾಗುತ್ತದೆ.

ವಿದೇಶಗಳಲ್ಲಿರುವ ಕಪ್ಪು ಹಣವನ್ನು ಹಿಂದಕ್ಕೆ ತರುವ ವಿಷಯದಲ್ಲಿ ನಮ್ಮ ರಾಜಕೀಯ ಪಕ್ಷಗಳಲ್ಲಿ ಒಮ್ಮತವಿಲ್ಲ. ಅದೇನೇ ಇರಲಿ, ಈ ಕುರಿತಂತೆ ಸಾರ್ವಜನಿಕರ ಅಭಿಪ್ರಾಯವೇ ಅಂತಿಮ. ಯಾವುದೇ ಸರ್ಕಾರ ಜನರ ಆಶಯಗಳಿಗೆ ತಕ್ಕಂತೆ ಕೆಲಸ ಮಾಡಬೇಕು. ದೇಶದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಪ್ರಯತ್ನಗಳು ಈಗ ಆರಂಭವಾಗಿವೆ. ಹಾಗೇ ದೇಶದ ಒಳಗೆ ಹಾಗೂ ಹೊರಗೆ ಇರುವ ಕಪ್ಪು ಹಣವನ್ನು ಪತ್ತೆ ಹಚ್ಚಿ ವಶಪಡಿಸಿಕೊಳ್ಳುವ ಪ್ರಯತ್ನಗಳೂ ಚುರುಕಾಗಬೇಕು. ಇಲ್ಲವಾದರೆ ದೇಶದಲ್ಲಿ ಶ್ರೀಮಂತರ ಸಂಖ್ಯೆ ಹೆಚ್ಚುತ್ತದೆ. ಜನ ಸಾಮಾನ್ಯರು ಬಡವರಾಗಿಯೇ ಉಳಿದು ಬಿಡುತ್ತಾರೆ. ಅದಕ್ಕೆ ಅವಕಾಶ ಕೊಡಬಾರದು.

■ ಪ್ರೇಮಕುಮಾರ್ ಹರಿಯಬ್ಬೆ

ಕಪ್ಪು ಹಣದ ಮೂಲ ಭ್ರಷ್ಟಾಚಾರ ಹಾಗೂ ತೆರಿಗೆ ವಂಚನೆ. ಸ್ವಾತಂತ್ರ್ಯಾನಂತರ ಕೇಂದ್ರ ಹಾಗೂ ವಿವಿಧ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಬಹಳಷ್ಟು ರಾಜಕೀಯ ಧುರೀಣರು ಭ್ರಷ್ಟಾಚಾರದ ಮೂಲಕ ಗಳಿಸಿದ ಅಪಾರ ಸಂಪತ್ತೇ ಈ ಕಪ್ಪು ಹಣ. ಈ ಹಣ ದೇಶದ ಅರ್ಥ ವ್ಯವಸ್ಥೆಯನ್ನು ಹಾಳು ಮಾಡಿದೆ. ಹಣದುಬ್ಬರಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲ, ನಮ್ಮ ಚುನಾವಣಾ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ.

